[Govt. of Karnataka C.R.P. 67]

| Deposition Sheets (RP.No.57) Form No.4 (Civil) | **IN THE COURT OF CIVIL JUDGE & J.M.F.C., KARKALA.** |
|---|---|

**Criminal Case No. 1567/2023**

**..................................................Vs....................................**

ಸಾಕ್ಷಿದಾರನ ಹೆಸರು ಃ ಟಿ ಡಿ ನಾಗರಾಜ್ ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಟಿ ಸಿ ಧರ್ಮಪ್ಪ ಸಿ.ಡಬ್ಲ್ಯೂಃ 23

ಪ್ರಾಯ ಃ 46 ವರ್ಷ

ಉದ್ಯೋಗ ಃ ಪೊಲೀಸ್ ನಿರೀಕ್ಷಕರು ಕಂಕನಾಡಿ ಪೊಲೀಸ್ ಠಾಣೆ

ವಾಸ ಃ ಮಂಗಳೂರು

ದಿಃ 16-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಡಿಸೆಂಬರ್ 2022 ರಿಂದ ಫೆಬ್ರವರಿ 2024 ರವರಿಗೆ ಕಾರ್ಕಳ ವೃತ ನೀರಿಕ್ಷಕರಾಗಿ ಕಾರ್ಕಳ ವೃತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 18-06-2023 ರಂದು ಚಾಸಾ-22 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಹೆಬ್ರಿ ಠಾಣೆಗೆ ಭೇಟಿ ನೀಡಿದ್ದು, ಠಾಣಾ ಆವರಣದಲ್ಲಿರಿಸಿದ್ದ ಅಪಘಾತಕ್ಕೊಳಪಟ್ಟ ಈಚರ್ ವಾಹನ ಮತ್ತು ಟಿಪ್ಪರ್ ಲಾರಿಯನ್ನು ಚಾಸಾ-21 ರವರು ತೋರಿಸಿಕೊಟ್ಟಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳ್ಳಿಗ್ಗೆ 11.30 ರಿಂದ 12.00 ಗಂಟೆಯವರೆಗೆ ಭಾವಚಿತ್ರ ತೆಗೆದು, ಸೊತ್ತು ಸ್ವಾಧೀನತಾ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿರುತ್ತೇನೆ. ನಂತರ ಅವುಗಳನ್ನು ಠಾಣಾ ಸೊತ್ತು ಪಟ್ಟಿ ಸಂಖ್ಯೆ 45/2023 ರಡಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದ ಮಹಜರನ್ನು ತಯಾರಿಸಲು ಚಾಸಾ-4 ಮತ್ತು 5 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ತೆರಳಿದ್ದು, ಅಲ್ಲಿ ಹಾಜರಿದ್ದ ಚಾಸಾ-4 ಮತ್ತು 5 ರವರ ಸಮಕ್ಷಮ ಚಾಸಾ-2 ರವರು ತೋರಿಸಿಕೊಟ್ಟಂತೆ ಮಧ್ಯಾಹ್ಣ 2.00 ಗಂಟೆಯಿಂದ 2.45 ರವರೆಗೆ ಘಟನಾ ಸ್ಥಳದ

ಮಹಜರು, ನಕಾಶೆ ತಯಾರಿಸಿರುತ್ತೇನೆ. ಸ್ಥಳದಲ್ಲಿ ಭಾವಚಿತ್ರ ತೆಗೆದಿರುತ್ತೇನೆ. ನಂತರ ಸ್ಥಳ ಮಹಜರು ಹಾಗೂ ನಕಾಶೆಗೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-2 ಮತ್ತು 3 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-16 ರವರಿಗೆ ವಾಹನಗಳ ತಪಾಸಣೆ ನಡೆಸ ವರದಿ ನೀಡುವಂತೆ ಕೋರಿಕೆಪತ್ರ ಸಲ್ಲಿಸಿರುತ್ತೇನೆ. ದಿಃ 19-06-2023 ರಂದು ಟಿಪ್ಪರ್ ಲಾರಿ ಮಾಲೀಕರಾದ ಚಾಸಾ-14 ರವರಿಗೆ ಐ.ಎಮ್.ವಿ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41(1)(ಎ) ಅಡಿಯಲ್ಲಿ ನೋಟೀಸು ಜಾರಿ ಮಾಡಿ ಠಾಣೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. ಸಂಜೆ 6.00 ಗಂಟೆಗೆ ಠಾಣೆಗೆ ಹಾಜರಾದ ಆರೋಪಿಯನ್ನು ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿದ್ದು, ನಂತರ ಚಾಸಾ-14 ರವರ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನಂತರ ಟಿಪ್ಪರ್ ಲಾರಿ ಮಾಲೀಕರಿಗೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ನಷ್ಟ ಭರ್ತಿ ಕರಾರನ್ನು ಪಡೆದುಕೊಂಡು ಟಿಪ್ಪರ್ ಲಾರಿ ಬಿಡುಗಡೆಗೊಳಿಸಿರುತ್ತೇನೆ. ನಂತರ ಚಾಸಾ-17 ಮತ್ತು 18 ರವರಿಂದ ಭಾರತೀಯ ಸಾಕ್ಷ್ಯ ಕಾಯಿದೆ ಕಲಂ 65(ಬಿ) ಅಡಿಯಲ್ಲಿ ದೃಢಪತ್ರಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 20-06-2023 ರಂದು ಈಚರ್ ಕ್ಯಾಂಟರ್ ಮಾಲೀಕರಾದ ಚಾಸಾ-13 ರವರಿಗೆ ಐ.ಎಮ್.ವಿ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನಂತರ ಈಚರ್ ವಾಹನ ಮಾಲೀಕರಿಗೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ನಷ್ಟ ಭರ್ತಿ ಕರಾರನ್ನು ಪಡೆದುಕೊಂಡು ಟಿಪ್ಪರ್ ಲಾರಿ ಬಿಡುಗಡೆಗೊಳಿಸಿರುತ್ತೇನೆ. ನಂತರ ದಿಃ 28-07-2023 ರಂದು ಚಾಸಾ-15 ರವರಿಂದ ಪಿ.ಎಮ್.ವರದಿ, ಚಾಸಾ-16 ರವರಿಂದ ಐ.ಎಮ್.ವಿ ವರದಿ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 28-07-2023 ರಂದು ಆರೋಪಿಗಳ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-10, ನಿಪಿ-11, ನಿಪಿ-14, ನಿಪಿ-16, ನಿಪಿ-19 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-10(ಸಿ), ನಿಪಿ-11(ಸಿ), ನಿಪಿ-14(ಡಿ), ನಿಪಿ-16(ಬಿ), ನಿಪಿ-19(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ರಿಂದ ನಿಪಿ-9, ನಿಪಿ-12, ನಿಪಿ-13 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿಯಲ್ಲಿರುವ ಪಡೆದುಕೊಂಡ 2 ಪ್ರಮಾಣ ಪತ್ರ, ಆರೋಪಿಗೆ ಐ.ಎಮ್.ವಿ ಕಲಂ 133 ರಡಿ ನೀಡಿದ ನೋಟೀಸು, ಅದಕ್ಕೆ ಪಡೆದುಕೊಂಡ ಉತ್ತರ, ನಷ್ಟ ಭರ್ತಿ ಕರಾರು, ಚಾಸಾ-13 ರವರಿಗೆ ಐ.ಎಮ್.ವಿ ಕಲಂ 133 ರಡಿ ನೀಡಿದ ನೋಟೀಸು, ಅದಕ್ಕೆ ಪಡೆದುಕೊಂಡ ಉತ್ತರ, ನಷ್ಟ ಭರ್ತಿ ಕರಾರು, ಪಿ.ಎಮ್ ವರದಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-20 ರಿಂದ 28 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-20(ಎ) ರಿಂದ 28(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಹುದು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಎಸ್.ಎನ್.ಕೆ. ವಕೀಲರಿಂದಃ</u>

ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖಾಧಿಕಾರಿಯಾಗಿರುತ್ತೇನೆ. ಅಪಘಾತವು ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಿರುತ್ತದೆ. ಮಹಜರನ್ನು ಒಂದು ದಿನ ತಡವಾಗಿ ಮಾಡಲಾಗಿರುತ್ತದೆ ಎಂದರೆ ಸರಿ. ಅಪಘಾತ ನಡೆದ ದಿನವೇ ಮಹಜರು ನಡೆಸದೆ ಇರಲು ಏನು ಕಾರಣ ಎಂದರೆ ವಾಹನ ತೆರವು ಗೊಳಿಸಬೇಕಿತ್ತು, ಮೃತ ಶರೀರವನ್ನು ಶವಪಂಚನಾಮೆಗೆ ಕಳುಹಿಸಬೇಕಿತ್ತು, ಕ್ರೇನ್ ತರಿಸಬೇಕಿತ್ತು. ಅಪಘಾತ ಸ್ಥಳ ತಿರುವಿನಿಂದ ಕೂಡಿರುವುದಿಲ್ಲ. ಅಪಘಾತ ಸ್ಥಳದಲ್ಲಿ ಅಪಘಾತ ವಲಯ ಎಂದು ಬೋರ್ಡ್ ಹಾಕಿರುತ್ತಾರೆ ಎಂದರೆ ಸ್ವಲ್ಪ ದೂರದಲ್ಲಿ ಹಾಕಿರುತ್ತಾರೆ. ಹೆಬ್ರಿಯಿಂದ ಆಗುಂಬೆ ಗೆ ಹೋಗುವ ರಸ್ತೆಯಿ ಮಧ್ಯ ಭಾಗದಲ್ಲಿ ಅಪಘಾತ ಆಗಿರುತ್ತದೆ. ರಸ್ತೆಯ ಎರಡೂ ಬದಿಯಲ್ಲಿ ಕಬ್ಬಿಣದ ತಡೆಪಟ್ಟಿ ಹಾಕಿರುತ್ತಾರೆ ಎಂದರೆ ಸರಿ. ತಡೆಪಟ್ಟಿಯನ್ನು ದಾಟಿ ವಾಹನ ನಿಲ್ಲಿಸಲು ಸಾಧ್ಯವಿಲ್ಲ ಎಂದರೆ ಸರಿ. ಅಪಪಘಾತವು ಜಕ್ಕನಮಕ್ಕಿ ತಿರುವಿನಲ್ಲಿ ಆಗಿರುತ್ತದೆ ಎಂದು ನಿಪಿ-1 ರಲ್ಲಿ ಕಾಣಿಸಲಾಗಿರುತ್ತದೆ ಎಂದರೆ ಸರಿ. ಈಚರ್ ವಾಹನ ಟಿಪ್ಪರ್ ಲಾರಿಯ ಮುಂಭಾಗದ ಬಲಭಾಗಕ್ಕೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಅಪಘಾತಕೊಳಪಟ್ಟ ವಾಹನಗಳನ್ನು ತೆರವು ಗೊಳಿಸುವಾಗ ಆರ್.ಟಿ.ಓ ರವರು ಇರಲಿಲ್ಲ. ತಕ್ಷೀರು ಸ್ಥಳದಲ್ಲಿ ಭಾವಚಿತ್ರ ತೆಗೆದಿರುವುದಿಲ್ಲ. ವಾಹನ ದಟ್ಟನೆ ಇದ್ದುದರಿಂದ ತೆಗೆದಿರುವುದಿಲ್ಲ. ಮಹಜರು ಸಮಯದಲ್ಲಿ 3 ಜನ ಸಿಬ್ಬಂದಿಗಳು ನನ್ನ ಜೊತೆ ಇದ್ದರು. ಅಪಘಾತ ನಡೆದ ದಿನ ಸ್ಥಳದಲ್ಲಿ ಭಾವಚಿತ್ರ ತೆಗೆದಿದ್ದರೆ ನಿಜವಾದದಿ ಆರೋಪಿ ಪತ್ತೆಯಾಗುತ್ತಿತ್ತು ಎಂದರೆ ಸರಿ. 1 ನೇ ಆರೋಪಿಯ ಡಿ.ಎಲ್ ನ್ನು ಸ್ವಾಧೀನಪಡಿಸಿಕೊಂಡಿರುತ್ತೇವೆ. ಚಾಸಾ-2 ರವರು ಪ್ರತ್ಯಕ್ಷ ಸಾಕ್ಷಿದಾರರು. ಚಾಸಾ-2 ರವರ

ಮಾಹಿತಿ ಮೇರೆಗೆ ಮಹಜರು ತಯಾರಿಸಿರುತ್ತೇವೆ. ಚಾಸಾ-2 ರವರು ಹಲವಾರು ಬಾರಿ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ-1 ರಲ್ಲಿ ಈಚರ್ ವಾಹನವನ್ನು ಅದರ ಚಾಲಕ ಅಪಘಾತ ಆಗದಂತೆ ತಪ್ಪಿಸಲು ಯಾವುದೇ ಪ್ರಯತ್ನ ಮಾಡದ ಕಾರಣ ಈಚರ್ ವಾಹನವು ಟಿಪ್ಪರ್ ಲಾರಿಯ ಬಲಬದಿಗೆ ಡಿಕ್ಕಿಹೊಡೆದು ನಿಂತಿರುತ್ತದೆ ಎಂದರೆ ಸರಿ. ಮುಂದುವರಿದು ತನಿಖೆಯಲ್ಲಿ ಎರಡೂ ವಾಹನ ಚಾಲಕರ ನಿರ್ಲಕ್ಷತನ ಕಂಡುಬಂದಿರುತ್ತದೆ. ಅಪಘಾತ ರಸ್ತೆ ಡಾಂಬರು ರಸ್ತೆ. ಅದರ ಎರಡೂ ಬದಿ ನಾಲ್ಕು ಅಡಿ ಅಗಲದ ಕಚ್ಚಾ ರಸ್ತೆ ಇದೆ. ನಕ್ಷೆಯಲ್ಲಿ ಅದನ್ನು ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿ ಕಚ್ಚಾ ರಸ್ತೆ ಎಂದು ಬರೆದಿರುವುದಿಲ್ಲ. ಈಚರ್ ವಾಹನ ಚಾಲಕ ಈ ಪ್ರಕರಣದ 1 ನೇ ಆರೋಪಿ. ಸ್ವಾಧೀನಪಡಿಸಿಕೊಂಡ ಈಚರ್ ಹಾಗೂ ಟಿಪ್ಪರ್ ವಾಹನಗಳ ಮೌಲ್ಯವನ್ನು ಸಾಮಾನ್ಯ ಜ್ಞಾನದ ಆಧಾರದ ಮೇರೆಗೆ ಕಾಣಿಸಿರುತ್ತೇವೆ. ಟಿಪ್ಪರ್ ಲಾರಿಯಲ್ಲಿ ಜಲ್ಲಿ ಕಲ್ಲಿನ ಲೋಡ್ ಇತ್ತು. ಟಿಪ್ಪರ್ ಲಾರಿಯಲ್ಲಿ ಸೆನ್ಸರ್ ಲಾಕ್ ಅಳವಡಿಸಲಾಗಿತ್ತು ಎಂದರೆ ಗೊತ್ತಿಲ್ಲ. ಆ ರೀತಿ ಅಳವಡಿಸುವುದು 2016 ರಿಂದ ಕಡ್ಡಾಯವಾಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಟಿಪ್ಪರ್ ಲಾರಿ 2019 ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ ಎಂದರೆ ಸರಿ. ಟಿಪ್ಪರ್ ಲಾರಿ 40-45 ವೇಗದಲ್ಲಿ ಮಾತ್ರ ಹೋಗಬಹುದು ಎಂದರೆ ಸರಿಯಲ್ಲ.

ಮಹಜರಿಗೆ ಪಂಚರನ್ನು ಸ್ಥಳದಲ್ಲಿಯೇ ನೋಟೀಸು ನೀಡಿ ಕರೆಸಿರುತ್ತೇವೆ. ಕನ್ಯಾನದಿಂದ ಅಪಘಾತ ಸ್ಥಳಕ್ಕೆ 25 ಕಿ.ಮೀ ದೂರ ಇದೆ ಎಂದರೆ ಗೊತ್ತಿಲ್ಲ. ಈ ಪ್ರಕರಣದ ಚಸಾ-6 ರವರು ಚಾರಾ ಗ್ರಾಮದವರು ಎಂದರೆ ಸರಿ. ಗುಳಿಬೆಟ್ಟುವಿನಿಂದ ಅಪಘಾತ ಸ್ಥಳಕ್ಕೆ 6-7 ಕಿ.ಮೀ ದೂರ ಇದೆ. ಚಸಾ-7 ರವರು ಗುಳಿಬೆಟ್ಟು ಗ್ರಾಮದವರು ಎಂದರೆ ಸರಿ. ಚಾಸಾ-6 ಮತ್ತು 7 ರವರು ಹಲವಾರು ಬಾರಿ ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಗೊತ್ತಿಲ್ಲ. ಸ್ಥಳೀಯರನ್ನು ಪಂಚರಾಗಿ ಮಾಡಲು ತೊಂದರೆ ಇತ್ತಾ ಎಂದರೆ ಹೆಬ್ರಿ ಪೇಟೆಯಿಂದ ಪಂಚರನ್ನು ಬರಮಾಡಿಕೊಂಡಿರುತ್ತೇವೆ. 1 ನೇ ಆರೋಪಿಗೆ 55 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. 1 ನೇ ಆರೋಪಿಗೆ ದೃಷ್ಟಿ ದೋಷ ಇದ್ದು, ಕನ್ನಡಕ ಬಳಸುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತ ಮಳೆಗಾಲ ಸಮಯದಲ್ಲಿ ಅಗಿರುತ್ತದೆ. ರಸ್ತೆ ಒದ್ದೆಯಾಗಿದ್ದರೆ ವಾಹನದ ವೇಗ ನಿಯಂತ್ರಣಕ್ಕೆ ಸಿಗುವುದಿಲ್ಲ ಎಂದರೆ ಸರಿ. ಮೃತರ ಕುಟುಂಬಕ್ಕೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ

ಯಾವುದೇ ಅಪಘಾತ ನಡೆದಿರುವುದಿಲ್ಲ ಹಾಗೂ ಪ್ರಕರಣಕ್ಕೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ನಿರ್ಲಕ್ಷತನದಿಂದ ಅಪಘಾತ ಆಗಿರುತ್ತದೆ ಎಂದರೆ 2 ನೇ ಆರೋಪಿಯ ನಿರ್ಲಕ್ಷತನವೂ ಇರುತ್ತದೆ. ಚಾಸಾ-1 ರವರು 2 ನೇ ಆರೋಪಿಯ ಸಹೋದ್ಯೋಗಿಯಾಗಿದ್ದು ಅವರಿಗೆ ಪಿರ್ಯಾದಿ ನೀಡಲು ಬಲವಂತ ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತ ನಡೆದ ದಿನವೇ ಭಾವಚಿತ್ರ ತೆಗೆದಿದ್ದರೆ ಅಪಘಾತಕ್ಕೆ ಕಾರಣ ಏನು ಎಂದು ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ